ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಅಧ್ಯಕ್ಷರೇ, ಮಹದಾಯಿ ನದಿ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ ಯೋಜನೆಯು ಕೆಳಗೆ ಸೂಚಿಸಿರುವಂತೆ ಒಟ್ಟು 9 ಟಿ.ಎಂ.ಸಿ. ಪ್ರಮಾಣದ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಉದ್ದೇಶ ಹೊಂದಿದೆ.

ಕರ್ನಾಟಕ ವಿದ್ಯುತ್ ನಿಗಮವು ಮಹದಾಯಿ ನದಿಗೆ ಅಡ್ಡಲಾಗಿ ಖಾನಾಪುರ ತಾಲ್ಲೂಕಿನ ಕೋಟ್ನಿ ಬಳಿ ಉದ್ದೇಶಿಸಿರುವ ಜಲಾಶಯದಿಂದ 4 ಟಿ.ಎಂ.ಸಿ.

ಖಾನಾಪುರ ತಾಲ್ಲೂಕಿನಲ್ಲಿ ಪಶ್ಚಿಮಮುಖಿ ನದಿಗಳಾದ ಕಳಸ, ಹಳತಾರ ಮತ್ತು ಪೋರ್ಲಿ ನದಿಗಳಿಗೆ ಅಡ್ಡಲಾಗಿ ಉದ್ದೇಶಿಸಿರುವ ಜಲಾಶಯಗಳಿಂದ 5 ಟಿ.ಎಂ.ಸಿ.

1996-97 ನೇ ಸಾಲಿನ ದರಗಳ ಪ್ರಕಾರ ಈ ಯೋಜನೆಗೆ ತಗಲುವ ವೆಚ್ಚವನ್ನು 181 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಮಹದಾಯಿ ನದಿಯು ಕರ್ನಾಟಕ ಮತ್ತು ಗೋವಾ ರಾಜ್ಯಗಳಿಗೆ ಸೇರಿರುವ ಅಂತರರಾಜ್ಯ ನದಿ ಆಗಿರುವುದರಿಂದ, ಗೋವಾ ಸರ್ಕಾರದ ಸಹಮತಿ ದೊರೆತ ನಂತರವೇ ಈ ಯೋಜನೆಯ ಕೆಲಸವನ್ನು ಪ್ರಾರಂಭಿಸಬಹುದಾಗಿದೆ.

ಆಗಸ್ಟ್ 1994 ರಲ್ಲಿ ಈ ಯೋಜನೆಯ ಬಗ್ಗೆ ಕರ್ನಾಟಕ ಮತ್ತು ಗೋವಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆದ್ದಿದ್ದು ಈ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಈ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮದ ಬಗ್ಗೆ ಅಧ್ಯಯನ ನಡೆಸುತ್ತಿದ್ದು ಒಂದು ಪ್ರಾಥಮಿಕ ವರದಿಯನ್ನು ಇತ್ತೀಚೆಗೆ ಕರ್ನಾಟಕ ವಿದ್ಯುತ್ ನಿಗಮಕ್ಕೆ ನೀಡಿದೆ. ಅಂತಿಮ ವರದಿ ಸಲ್ಲಿಸಲು ಈ ಸಂಸ್ಥೆಗಳಿಗೆ 14 ತಿಂಗಳ ಅವಧಿ ಕೊಡಲಾಗಿದೆ.

ಅಂತಿಮ ವರದಿ ಸ್ವೀಕೃತವಾದ ನಂತರ ಗೋವಾ ಸರ್ಕಾರದ ಸಹಮತಿ ಪಡೆದು ಈ ಯೋಜನೆಗಳ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಈ ಯೋಜನೆಯ ಪೂರಕ ಕಾಮಗಾರಿಗಳಾದ ಕಛೇರಿ ಕಟ್ಟಡ, ವಸತಿ ಗೃಹ ಕೊಡು ರಸ್ತೆ ಹಾಗೂ ಆನ್ವೇಷಣೆಗೆ ಬೇಕಾದ ಕಾಮಗಾರಿಗಳನ್ನು ಕೈಗೊತ್ತಿಕೊಳ್ಳಲಾಗಿದ್ದು, ಮಾರ್ಚ್ 96ರವರೆಗೆ ಒಟ್ಟು 80.88 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1996-97 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 50 ಲಕ್ಷ ಅನುದಾನ ಒದಗಿಸಲಾಗಿದೆ.

ಉಡುಪಿ ತಾಲ್ಲೂಕು ಕಛೇರಿಯಲ್ಲಿ ವಿಧವಾ ಹಾಗೂ ವೃದ್ಧಾಪ್ಯ ವೇತನ ವಿಳಂಬ

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಸನ್ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕು ಕಛೇರಿಯಲ್ಲಿ 1995-96 ರ ಸಾಲಿನಲ್ಲಿ ಎಷ್ಟು ಜನರಿಗೆ ಆಥವಾ ಹಾಗೂ ವೃದ್ಧಾಪ್ಯ ವೇತನ ಕೊಡಲು ಬಾಕಿ ಇದೆ ? ವಿಧವಾ ಹಾಗೂ ವೃದ್ಧಾಪ್ಯ ವೇತನ ನೀಡುವಲ್ಲಿ ಅನಾವಶ್ಯಕ ವಿಳಂಬವಾಗಿರುವುದಕ್ಕೆ ಕಾರಣಗಳೇನು ? ಅನೇಕ ಮಂದಿಗೆ ವೃದ್ಧಾಪ್ಯ ಹಾಗೂ ವಿಧವಾ ವೇತನಗಳು ಅನೇಕ ತಿಂಗಳುಗಳಿಂದ ಬಾಕಿ ಇರುವುದನ್ನು ನನ್ನ ಗಮನಕ್ಕೆ ಬಂದಿದ್ದು ಈ ವೇತನಗಳ ಪಾವತಿಯನ್ನು ಕ್ರಮಬದ್ಧವಾಗಿ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ? ಈ ಬಗ್ಗೆ ಉಡುಪಿ ತಾಲ್ಲೂಕು ಕಛೇರಿಯ ಸಿಬ್ಬಂದಿ ವ್ಯವಸ್ಥೆಯಲ್ಲೇನಾದರೂ ನಿರ್ಲಕ್ಷ್ಯತನ ಕಂಡು ಬಂದಿರುವುದು ಸಹಜವೇ ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):- ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ತಾಲ್ಲೂಕಿನಲ್ಲಿ 1995-96 ನೇ ಸಾಲಿನಲ್ಲಿ 141 ವಿಧವಾ ವೇತನ ಹಾಗೂ 53 ವೃದ್ಧಾಪ್ಯ ವೇತನಕ್ಕೆ ಅರ್ಜಿಗಳನ್ನು ಈಗಾಗಲೇ ಮಂಜೂರು ಮಾಡಲಾಗಿದ್ದು, ಈಗ ಸದರಿ ಕಛೇರಿಯಲ್ಲಿ ಯಾವುದೇ ಅರ್ಜಿಗಳು ಮುಂಜೂರಾತಿಗಾಗಿ ಬಾಕಿ ಇರುವುದಿಲ್ಲ. ಆದರೆ ಉಡುಪಿ ಉಪ ಖಜಾನೆಯಲ್ಲಿ 12 ವೃದ್ಧಾಪ್ಯ ವೇತನ ಮತ್ತು 6 ವಿಧವಾ ವೇತನ ಪಾವತಿಯು ಮೇ 1996 ರಿಂದ ಕೆಲವೊಂದು ಅಗತ್ಯವಿರುವ ನಿಗಧಿತ ನಮೂನೆಗಳು ಕ್ಲಿಪ್ತ ಸಮಯದಲ್ಲಿ ಸರಬರಾಜು ಆಗದೇ ಇರುವ ಕಾರಣದಿಂದ ಬಾಕಿ ಉಳಿದಿರುತ್ತದೆ. ಇದೀಗ ಈ ನಮೂನೆಗಳು ಸರಬರಾಜಾಗಿದ್ದು ಬಾಕಿ ಉಳಿದಿರುವ ಪ್ರಕರಣಗಳ ಬಗ್ಗೆ ಜರೂರಾಗಿ ಪಾವತಿ ಮಾಡಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಇದರಲ್ಲಿ ಕಛೇರಿಯ ಸಿಬ್ಬಂದಿ ವರ್ಗದವರಿಂದ ಯಾವುದೇ ರೀತಿಯ ನಿರ್ಲಕ್ಷ್ಯತನ ತೋರಿಸಿರುವುದು ಕಂಡು ಬಂದಿಲ್ಲ.

ಶಿವಮೊಗ್ಗ ತಾಲ್ಲೂಕು ಬೊಮ್ಮನ ಕಟ್ಟಿ ಗ್ರಾಮದ ಭೂ ಸ್ವಾಧೀನದಿಂದೂ ಕೈ ಬಿಟ್ಟ ವಸತಿಗಾಗಿ ಭೂ ಪರಿವರ್ತನೆಯಾಗದಿರುವುದು

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ತಾಲ್ಲೂಕು ಬೊಮ್ಮನ ಕಟ್ಟಿ ಗ್ರಾಮದ ರಿ.ಸಿ.ನಂ.86, 128 ಮತ್ತು 129 ಒಟ್ಟು 10 ಎಕರೆ 39 ಗುಂಟೆ ಜಮೀನನ್ನು ಭೂ ಸ್ವಾಧೀನದಿಂದ ಕೈಬಿಟ್ಟು ವಸತಿಗಾಗಿ ಭೂ ಪರಿವರ್ತನೆ ಮಾಡಲು ಸಂತೋಷಿಯಾ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಇವರಿಗೆ ಕೊಡಲು ಸರ್ಕಾರಿ ಆಜ್ಞೆಯು ಹೊರಬರದೆ ಕದತವು ಸಂಬಂಧಪಟ್ಟ ಇಲಾಖೆಯಲ್ಲಿ ವ.ನ.ಇ. 395:ಟಿಟಿಪಿ:92-93 ಸ್ಥಗಿತಗೊಂಡಿರುವುದರಿಂದ ಉದ್ಭವಾಗಿರುವ ಪರಿಸ್ಥಿತಿಯ ಬಗ್ಗೆ ನಗರಾಬಿವೃದ್ಧಿ ಸಚಿವರು ಗಮನ ಸೆಳೆಯಲು ಇಚ್ಚಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರಿ ಸಚಿವರು) (ನಗರಾಭವೃದ್ಧಿ ಸಚಿವರು ಪರವಾಗಿ):- ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಶಿವಮೊಗ್ಗ, ತಾಲ್ಲೂಕು ಬೊಮ್ಮನ ಕಟ್ಟಿ ಗ್ರಾಮದ ಸ.ನಂ.86, 128, 129ರಲ್ಲಿ ಒಟ್ಟು 10 ಎಕರೆ 38 ಗುಂಟೆ ಜಮೀನನ್ನು ಸಂತೋಷಮಾತಾ ಮಹಿಳಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಹಸಿರು ಪಟ್ಟಿಯಿಂದ ವಸತಿಗಾಗಿ ಬದಲಾವಣೆ ಮಾಡುವ ಪ್ರಸ್ತಾವನೆ ಕಳುಹಿಸಿದ್ದರು.

ಭೂ ಬದಲಾವಣೆ ಕೋರಿರುವ ಜಮೀನಿದೆ ಪ್ರಾಧಿಕಾರವು 1986-87ರಲ್ಲಿ ಪ್ರಾಥಮಿಕ ಪ್ರಕಟಣೆ ಹೊರಡಿಸಿದೆ. ಅನಂತರ 1988 ರಲ್ಲಿ ಸದರಿ ಜಮೀನಿನ ಮಾಲೀಕರು ಇದನ್ನು ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮಾರಾಟ ಮಾಡಲು ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಇದು ಣೂ ಸ್ವಾಧೀನ ಕಾನೂನಿಗೆ ತೀರಾ ವಿರೋಧವಾಗಿದೆ. ಭೂ ಸ್ವಾಧೀನ ಮಾಡಲು ಅಧಿಸೂಚನೆಯನ್ನು ಹೊರಡಿಸಿದ ನಂತರ ಯಾವುದೇ ಮಾಲೀಕರು ಜಮೀನನ್ನು ಮಾರಾಟ ಮಾಡಲು ಕರಾರು ಪತ್ರ ಮಾಡುವುದಕ್ಕೆ ಬರುವುದಿಲ್ಲ ಸದರಿ ಜಮೀನಿನ್ನು ಭೂ ಸ್ವಾಧೀನದಿಂದ ತಪ್ಪಿಸಬೇಕೆಂಬ ಉದ್ದೇಶದಿಂದಲೇ ಈ ರೀತಿ ಮಾಡಿರುತ್ತಾರೆ ಎಂಬ ಅಭಿಪ್ರಾಯ ಬರುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಸೆಕ್ಷನ್ 17(1) ರ ಪ್ರಕಾರ ಪ್ರಾಧಿಕಾರವು ನೋಟಿಪಿಕೇಷನ್ ಮಾಡಿರುತ್ತಾರೆ. ಈ ಬಗ್ಗೆ ಸರ್ಕಾರದ ವತಿಯಿಂದ ಆದೇ ಕಾಯಿದೆ ಸೆಕ್ಷನ್ 19 (1) ರಂತೆ ನೋಟೀಪಿಕೇಷನ್ ಆಗಿಲ್ಲದ

ಕಾರಣ ಸದರಿ ಪ್ರಸ್ತಾವನೆ ಜಮೀನನ್ನು ಹೊಂದಿರುವ ಯೋಜನೆ ಆದೇ ಕಾಯ್ದೆ ಸೆಕ್ಷನ್ 27 ರ ರೀತ್ಯಾ ವಿಶಿಯೇಟ್ (Vitiate) ಆಗುತ್ತದೆ. ಎಂಬ ಪ್ರಸ್ತಾವನೆ ಉದ್ಭವಿಸುವುದಿಲ್ಲ. ಈ ಹಿನ್ನಲೆಯಲ್ಲಿ ಈ ಜಮೀನನ್ನು ಭೂ ಸ್ವಾಧೀನದಿಂದ ಕೈ ಬಿಡಬೇಕೆಂಬುದನ್ನು ಸರ್ಕಾರಿ ಪತ್ರ ಸಂಖ್ಯೆ ವನಇ 784 ಎಂಐಬಿ 92 ದಿನಾಂಕ 14-10-93ರಲ್ಲಿ ಸರ್ಕಾರ ತಿರಸ್ಕರಿಸಿದೆ. ಹಾಗೂ ಈ ಜಮೀನನ್ನು ಪ್ರಾಧಿಕಾರದ ಯೋಜನೆಯಲ್ಲಿ ಅಳವಡಿಸಿಕೊಂಡು ಸೂಕ್ತ ಯೋಜನೆಯನ್ನು ತಯಾರಿಸುವಂತೆ ಶಿವಮೊಗ್ಗ ಪ್ರಾಧಿಕಾರ ಆಯುಕ್ತರಿಗೆ ನೀಡಿದೆ.

ಪ್ರಾಥಮಿಕ ಅಧಿಸೂಚನೆಯಿಂದ ಪ್ರಸ್ತಾವಿತ ಜಮೀನನ್ನು ಭೂ ಸ್ವಾಧೀನ ಕ್ರಮದಿಂದ ಕೈಬಿಡದ ಹೊರತು ಭೂ ಬದಲಾವಣೆ ಮಾಡಲು ಬರುವುದಿಲ್ಲ. ಈ ಹಿನ್ನೆಯಲ್ಲಿ ಖಾಸಗಿ ಸಂಘಕ್ಕೋಸ್ಕರ ಪ್ರಾಧಿಕಾರದ ಯೋಜನೆಯಲ್ಲಿ ಜಮೀನನ್ನು ಬಿಟ್ಟುಕೊಡುವುದು ಸರಿಯಲ್ಲವೆಂದು ಈ ಭೂ ಉಪಯೋಗೆ ಬದಲಾವಣೆ ಪ್ರಸ್ತಾವನೆಯನ್ನು ತಿರಸ್ಕರಿಸಿ ದಿನಾಂಕ 19.5.94 ರಂದು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಆದರಂತೆ ಪ್ರಾಧಿಕಾರವು ದಿನಾಂಕ 22-6-94ರಲ್ಲಿ ಸದರಿ ಸಂಘಕ್ಕೆ ಪ್ರಸ್ತಾವನೆಯನ್ನು ಸರ್ಕಾರ ತಿರಸ್ಕರಿಸುವ ಬಗ್ಗೆ ಹಿಂಬರಹ ನೀಡಿದೆ.

ಇಷ್ಟಾದರೂ ಈ ಜಮೀನಿನ ಭೂ ಬದಲಾವಣೆ ಬಗ್ಗೆ ಮೇಲಿಂದ ಮೇಲೆ ಮನವಿಗಳು ಬರುತ್ತಿದ್ದ ಕಾರಣ ಸರ್ಕಾರವು ಪ್ರಾಧಿಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಪುನಃ ಅರ್ಜಿದಾರರ ಬೇಡಕೆಗಳನ್ನು ಪರಿಶೀಲಿಸಿದೆ ಈ ವಿಷಯದಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ನೀಡಿರುವ ವರದಿಯಲ್ಲಿ, ಈ ಜಮೀನನ್ನು ಹಿಂದಿನ ಶಿವಮೊಗ್ಗ ನಗರಾಭಿವೃದ್ಧಿ ಮಂಡಳಿಯಿಂದ ಅಭಿವೃದ್ಧಿ ಯೋಜನೆಗಾಗಿ ದಿನಾಂಕ 23-10-86 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಭೂ ಸ್ವಾಧೀನ ಪ್ರಾಥಮಿಕ ಪ್ರಕಟಣೆ ಹೊರಡಿಸಲಾಗಿದೆ ಮುಂದಕ್ಕೆ ಯಾವುದೇ ರೀತಿಯ ಭೂ ಸ್ವಾಧೀನ ನಡವಳಿಕೆಯನ್ನು ಕೈಗೊಂಡಿಲ್ಲವಾದ್ದರಿಂದ ಬೊಮ್ಮನ ಕಟ್ಟೆ ಗ್ರಾಮದ ಪೂಣೆ ಸರ್ವೆ. ನಂ .ಗಳನ್ನು ಪ್ರಾಧಿಕಾರವೇ ಯೋಜನೆಯಿಂದ ಕೈಬಿಟ್ಟು ಆಶ್ರಯ ಯೋಜನೆಗಾಗಿ ಶಿವಮೊಗ್ಗ ನಗರ ಸಭೆಗೆ ಸಹಿಸಿರುತ್ತಾರೆ ನಗರ ಸಭೆಯವರು ಸಹ ಸದರಿ ಪ್ರಸ್ತಾವನೆಯಲ್ಲಿನ ಸರ್ವೆ ನಂ.ಗಳ ಜಮೀನನ್ನು ಕೈಬಿಟ್ಟಿರುತ್ತಾರೆಂದು ತಿಳಿಸಿದ್ದಾರೆ. ಆದರೆ ನಗರ ಸಭೆಯವರು ಸಹ ಈ ಜಮೀನನ್ನು ಆಶ್ರಯ ಯೋಜನೆ ರಚಿಸದೆ ಏತಕ್ಕೆ ಕೈಬಿಟ್ಟರು ಎಂಬ ವಿಷಯವನ್ನು ಪರಿಶೀಲಿಸಲಾಗುವುದು.

ಶಿವಮೊಗ್ಗ ಜಿಲ್ಲಾಧಿಕಾಗಿಗಳು ನೀಡಿರುವ ವರದಿಯ ಹಿನ್ನೆಲೆಯಲ್ಲಿ ಸದರಿ ಜಮೀನಿನ ಭೂ ಉಪಯೋಗ ಬದಲಾವಣೆಯನ್ನು ಮತ್ತೊಮ್ಮೆ ಪುನರ್ ಪರಿಶೀಲಿಸಿ ದಿನಾಂಕ 19-5-94ರ ಸರ್ಕಾರಿ ಪತ್ರದಲ್ಲಿ ಸದರಿ ಭೂ ಬದಲಾವಣೆ ಪ್ರಸ್ತಾವನೆಯನ್ನು ತಿರಸ್ಕರಿಸಲು ತೀರ್ಮಾನಿಸಿರುವುದು ಸರಿ ಎಂದು ಪುನರುಚ್ಚರಿಸಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ದಿನಾಂಕ 6-7-96 ರಂದು ಪತ್ರ ಬರೆದು ಭೂ ಬದಲಾವಣೆ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. ವಾಸ್ತಾವಾಂಶ ಈ ರೀತಿ ಇರುವಾಗ ಬೊಮ್ಮನ ಕಟ್ಟೆ ಗ್ರಾಮದ 10 ಎಕರೆ 30 ಗುಂಟೆ ಜಮೀನಿಗೆ ಭೂ ಪರಿವರ್ತನೆ ಮಾಡಲು ಸರ್ಕಾರಿ ಆದೇಶ ಹೊರ ಬಂದಿಲ್ಲ ಎಂಬುದರಲ್ಲಿ ಯಾವುದೇ ರೀತಿಯ ಸತ್ಯಾಂಶ ಇರುವುದಿಲ್ಲ.

ಗಮನ ಸೆಳೆಯುವ ಸೂಚನೆ